ಕಾಲರಾ'ದಂಥ ಅದ್ಭುತ ಪ್ರಣಯ ಕಾದಂಬರಿ ಬರೆದ. ನಡುನಡುವೆ ಅಪರೂಪದ ಪುಟ್ಟ ಕಾದಂಬರಿ, ಕತೆ, ಕಥಾನಕಗಳನ್ನು ಬರೆದ.

ಹದಿನೇಳು ವರ್ಷದ ಹುಡುಗನಾಗಿದ್ದಾಗಿನಿಂದ ಬರೀ ಬರೆಯುವ ಕೆಲಸವನ್ನೇ ಮಾಡಿದ್ದ ಕೊಲಂಬಿಯಾದ ಮಾರ್ಕ್ವೆಜ್ (1927–2014) ಪೂರ್ಣ ಮರೆವಿನ ಘಟ್ಟ ತಲುಪಿದ ಮೇಲೆ ಎರಡು ವರ್ಷ ಬದುಕಿದ್ದ. ಆಗ ಅವನು ಹೇಗಿದ್ದ, ಏನು ಮಾಡುತ್ತಿದ್ದ, ಅವನಿಗೆ ಏನಾಗುತ್ತಿತ್ತು ಎಂಬುದು ಹೊರಗಿನವರಿಗೆ ಹೆಚ್ಚು ಗೊತ್ತಿರಲಿಲ್ಲ. ಅಪ್ಪನ ಈ ಘಟ್ಟದ ಬಗ್ಗೆ ಅವನ ಮಗ ರೊಡ್ರಿಗೊ ಗಾರ್ಸಿಯಾ ಈಚೆಗೆ 'ಎ ಫೇರ್ ವೆಲ್ ಟು ಗ್ಯಾಬೊ ಅಂಡ್ ಮರ್ಸಿಡಿಸ್: ದ ಪಬ್ಲಿಕ್, ದ ಪ್ರೈವೇಟ್, ದ ಸೀಕ್ರೆಟ್' ಎಂಬ ಪುಟ್ಟ ಪುಸ್ತಕ ಬರೆದಿದ್ದಾನೆ. ಮಾರ್ಕ್ವೆಜ್ ಮನೆಯವರ ಬಾಯಲ್ಲಿ, ಲ್ಯಾಟಿನ್ ಅಮೆರಿಕದ ಜನರ ಬಾಯಲ್ಲಿ ಪ್ರೀತಿಯ 'ಗ್ಯಾಬೋ'. ಮಾರ್ಕ್ವೆಜ್ ಪತ್ನಿ ಮರ್ಸಿಡಿಸ್. ಆರು ವರ್ಷಗಳ ಅವಧಿಯಲ್ಲಿ ಅಪ್ಪ, ಅಮ್ಮ ಇಬ್ಬರನ್ನೂ ಕಳೆದುಕೊಂಡ ರೊಡ್ರಿಗೊ ಬರೆದ ಪುಸ್ತಕದಲ್ಲಿ ಮಾರ್ಕ್ವೆಜ್ ಮರೆವಿನ ಕಾಲದ ವಿನೋದ, ವಿಷಾದ, ಯಾತನೆ; ಮತ್ತೆಂದೂ ಮರಳಿ ಬಾರದೇ ಹೋದ ನೆನಪಿನ ಜೊತೆಗೆ ಆ ಮಹಾಪ್ರತಿಭೆಯ ಸೆಣಸಾಟಗಳು ಮನ ಕಲಕುತ್ತವೆ. 'ಮನುಷ್ಯನ ಬದುಕಿನಲ್ಲಿ ಸಾರ್ವಜನಿಕ, ಖಾಸಗಿ ಹಾಗೂ ಗುಪ್ತ ಎಂಬ ಮೂರು ಮುಖಗಳಿವೆ' ಎಂದಿದ್ದ ಮಾರ್ಕ್ವೆಜ್ ಮಾತು ರೊಡ್ರಿಗೊ ಪುಸ್ತಕದ ವಿವರಣಾ ಶೀರ್ಷಿಕೆಯಾಗಿದೆ.

**2**

ಮಾರ್ಕ್ವೆಜ್ ಇನ್ನೇನು ಎಪ್ಪತ್ತನೆಯ ವಯಸ್ಸು ತಲುಪಲಿದ್ದಾಗ ಒಂದು ರಾತ್ರಿ ಮಗ ಕೇಳಿದ್ದ: 'ಅಪ್ಪಾ, ರಾತ್ರಿ ಲೈಟ್ ಆಫ್ ಮಾಡಿದ ಮೇಲೆ ಏನು ಯೋಚಿಸ್ತಾ ಇರ್ತೀಯ?'

'ಇನ್ನೇನು ಎಲ್ಲ ಕೆಲಸ ಹೆಚ್ಚು ಕಡಿಮೆ ಮುಗೀತಾ ಬಂದಿದೆ ಅನ್ಸುತ್ತೆ' ಎಂದ ಮಾರ್ಕ್ವೆಜ್, ನಗುತ್ತಾ ಹೇಳಿದ: 'ಇನ್ನೂ ಟೈಮಿದೆ. ಈಗಲೇ ತೀರಾ ಚಿಂತೆ ಮಾಡಬೇಕಾದ್ದಿಲ್ಲ ಆದರೆ ಒಂದಿನ ಇದ್ದಕ್ಕಿದ್ದಂತೆ ಎದ್ದು ನೋಡ್ತೀನಿ. ವಯಸ್ಸಾಗೇಬಿಟ್ಟಿದೆ. ಹಿಂಗೇ ಅದು ಹಠಾತ್ತನೆ ಬರುತ್ತೆ. ಯಾವ ಸೂಚನೇನೂ ಕೊಟ್ಟಿರಲ್ಲ. ದಿಗ್ಭ್ರಮೆ ಆಗುತ್ತೆ. ಭಾಳಾ ವರ್ಷಗಳ ಕೆಳಗೆ ಯಾರೋ ಹೇಳಿದ್ದರು– 'ಲೇಖಕನ ಜೀವನದಲ್ಲಿ ಒಂದು ಕಾಲ ಎದುರಾಗುತ್ತೆ. ಆಗ ಅವನ ಕೈಲಿ ದೊಡ್ಡ ಕಾದಂಬರಿ ಬರೆಯೋಕಾಗಲ್ಲ. ತಲೇಲಿ ದೊಡ್ಡ ಆರ್ಕಿಟೆಕ್ಚರ್ ಹಿಡಿಯೋ ಶಕ್ತಿ ಇರಲ್ಲ. ಅಪಾಯಕಾರಿ ಸಾಹಸ ಮಾಡಿ ದೊಡ್ಡ ಕಾದಂಬರೀನ ನಿಭಾಯಿಸೋ ಕೆಲಸ ಆಗಲ್ಲ.' ನಿಜ. ನನಗೂ ಈಗ ಹಂಗೇ ಅನ್ನಿಸುತ್ತೆ. ಇನ್ನು ಮೇಲೆ ಪುಟ್ಟ ಪುಟ್ಟ ಕೃತಿ ಬರೀಬೌದು, ಅಷ್ಟೇ'

ಮಾರ್ಕ್ವೆಜ್‌ಗೆ ಎಂಬತ್ತಾದಾಗ ಮಗ ಕೇಳಿದ: 'ಅಪ್ಪಾ, ಈಗ ಹೆಂಗನ್ಸುತ್ತೆ?

'ಎಂಬತ್ತರ ನೋಟ ನಿಜಕ್ಕೂ ಅಚ್ಚರಿ ಹುಟ್ಟಿಸುತ್ತೆ. ಕೊನೆಗಾಲ ಹತ್ತಿರ ಬರ್ತಾ ಇದೆ.'

'ಭಯ ಆಗುತ್ತಾ?'

'ಭಾಳಾ ದುಃಖ ಆಗುತ್ತೆ.'

ಇದಾದ ಮೇಲೊಂದು ದಿನ ಮಾರ್ಕ್ವೆಜ್ ಹೇಳಿದ್ದ: 'ನಾನು ಸಾವನ್ನ ಅಷ್ಟೊಂದು ಯಾಕೆ ದ್ವೇಷಿಸ್ತೀನಿ ಗೊತ್ತಾ? ನನ್ನ ಕೈಲಿ ಬರೆಯೋಕೇ ಆಗದೇ ಇರೋ ನನ್ನ ಜೀವನದ ಏಕ ಮಾತ್ರ ಅಂಶ ಅಂದ್ರೆ ಸಾವು; ಅದಕ್ಕೇ ಅದನ್ನ ಕಂಡ್ರಾಗಲ್ಲ.' ತನ್ನ ಜೊತೆಯಲ್ಲಿದ್ದವರೆಲ್ಲ ಸಾಯಲಾರಂಭಿಸಿದಾಗ, 'ಹಿಂದೆ ಸಾಯದೇ ಇದ್ದೋರೆಲ್ಲ ಈಗ ಸಾಯ್ತಾ ಇದಾರೆ' ಎಂದು ಎಲ್ಲರನ್ನೂ ನಗಿಸಿದ್ದ. ಯಾರು ಸತ್ತರೂ ಮಾರ್ಕ್ವೆಜ್ ಅವರ ಶವಸಂಸ್ಕಾರಕ್ಕೆ ಹೋಗುತ್ತಿರಲಿಲ್ಲ. 'ಗೆಳೆಯರನ್ನ ಹೂಳೋದು ನನಗೆ ಇಷ್ಟ ಇಲ್ಲ' ಅನ್ನುತ್ತಿದ್ದ.

ಆದರೆ, ಸಾವಿಗೆ ಮೊದಲೇ ಮರಣದಂಥ ಮರೆವಿನ ಕಾಯಿಲೆ ಅವನನ್ನು ಆವರಿಸತೊಡಗಿತು. ಮಹಾಪ್ರತಿಭೆ ಮಾರ್ಕ್ವೆಜ್ ನೆನಪಿನ ಜೊತೆ ಸೆಣಸತೊಡಗಿದ್ದ. ಪೂರ್ಣ ಮರೆವು ಆವರಿಸುವ ಎರಡು ವರ್ಷಗಳ ಮೊದಲೇ ಮನಸ್ಸು ದಿಕ್ಕೆಡುತ್ತಿದೆ ಎಂಬುದು ಗೊತ್ತಾಗತೊಡಗಿತ್ತು. 'ನೆನಪು ಹೋಗ್ತಾ ಇದೆ, ಏನಾದರೂ ಮಾಡಿ, ಏನಾದರೂ ಮಾಡಿ' ಎಂದು ಅವರಿವರನ್ನು ಕೇಳುತ್ತಲೇ ಇದ್ದ.

ದಿಗ್ಭ್ರಮೆಗೊಂಡ ಮಾರ್ಕ್ವೆಜ್, 'ಅಲ್ರಪ್ಪಾ, ನಾನು ಕೆಲಸ ಮಾಡೋದೇ ನೆನಪಿನಿಂದ. ನೆನಪೇ ನನ್ನ ಸಾಧನ. ನೆನಪೇ ನನ್ನ ಮೂಲದ್ರವ್ಯ. ನೆನಪೇ ಇಲ್ಲದೆ